



ಹೋಗಿದ್ದ. ಡಾ.ಪ್ರಾಣ ಜೀವನ್ ಮೆಹತಾರವರ ಖರ್ಚು ಮತ್ತು ಬಾಪೂ ಅವರ ಇಷ್ಟ ಎರಡೂ ಅಪಯಶಸ್ಸನ್ನು ಕಂಡಿದ್ದವು. ಆದರೆ ಈಗ ಎಲ್ಲವೂ ಸಹ ಕೊನೆಗೊಂಡಿತ್ತೆ? ಒಂದು ವೇಳೆ ಈಗಲೂ ಬಾಪೂ ತನ್ನನ್ನು ವಿದೇಶಕ್ಕೆ ಕಳುಹಿಸಿದರೆ? ಡಾ.ಮೆಹತಾರವರ ಪ್ರಸ್ತಾಪ ಹಾಗೆಯೇ ಇದೆ. ಒಂದು ವೇಳೆ ಬಾಪೂ ಈ ಬಾರಿ ತನ್ನನ್ನು ವಿದೇಶಕ್ಕೆ ಕಳುಹಿಸಿದರೆ ಎಷ್ಟು ಚೆಂದ...

ಒಮ್ಮೆ ಅವನು ಬ್ಯಾರಿಸ್ಟರ್ ಆದರೆ ದೇಶದ ಸೇವೆಯೊಂದಿಗೆ ಮೂವರು ತಮ್ಮಂದಿರು ಮಣಿಲಾಲ, ರಾಮದಾಸ ಮತ್ತು ದೇವದಾಸರ ಅಧ್ಯಯನದ ವ್ಯವಸ್ಥೆಯನ್ನು ತಾನು ಮಾಡಬಹುದು. ಮಣಿಲಾಲ ಏನೂ ಮಾತನಾಡುವುದಿಲ್ಲ, ರಾಮದಾಸ ಬಾಪೂ ಅಂತೆಯೇ ಇದ್ದಾನೆ, ಆದರೆ ದೇವದಾಸನ ವಿಷಯವೇ ಬೇರೆಯಾಗಿದೆ. ಅವನ ಮನಸ್ಸಿಗೆ ಸಮಾಧಾನ ಹೇಳುವುದು ಕಷ್ಟದ ಸಂಗತಿಯಾಗಿತ್ತು.

ಮರುದಿನ ಹರಿಲಾಲ ಒಂದು ಅನುಕೂಲಕರ ಸಮಯವನ್ನು ನೋಡಿ ಬಾಪೂ ಅವರಲ್ಲಿ, ತನ್ನ ಮನಸ್ಸಿನಲ್ಲಿ ಸದಾ ಬುಗುರಿಯಂತೆ ತಿರುಗುತ್ತಿದ್ದ ಈ ವಿಷಯವನ್ನು ಪ್ರಸ್ತಾಪಿಸಿದ. ಮೊದಲು ಅವನಿಗೆ, ಬಾಪೂ ಅವರೇ ಈ ವಿಷಯವನ್ನು ಪ್ರಸ್ತಾಪಿಸುತ್ತಾರೆ, 'ನೀನು ವಿದೇಶಕ್ಕೆ ಹೋಗಲು ಉತ್ಸುಕನಾಗಿರುವ ವಿಷಯ ನನಗೆ ತಿಳಿದಿದೆ' ಎಂದು ಬಹುಶಃ ತನ್ನ ಮನಸ್ಸಿನ ಆಳದಲ್ಲಿರು ವಿಷಯನ್ನು ತಿಳಿಯಲು ಮತ್ತೆ ಪ್ರಯತ್ನಿಸುತ್ತಾರೆ ಎಂದು ಅನ್ನಿಸುತ್ತಿತ್ತು. ಆದರೆ ಹೀಗಾಗಲಿಲ್ಲ, ಹರಿಲಾಲನೇ ವಿಷಯವನ್ನು ಪ್ರಸ್ತಾಪಿಸಿದ.

'ಬಾಪೂಜಿ, ಭಗನ್‌ಲಾಲ್ ಹಿಂದೂಸ್ತಾನಕ್ಕೆ ಹೋದ...'

'ಹೌದು ಹರಿ' ಬಾಪೂ ಆಗ ಒಂದು ದುಂಡು ಮೇಜನ್ನು ತಯಾರಿಸಲು ಮರವನ್ನು ಸೀಳುವ ಪ್ರಯಾಸವನ್ನು ಮಾಡುತ್ತಿದ್ದರು. ಅವರು ತಮ್ಮ ಕೈಯಲ್ಲಿದ್ದ ಉಜ್ಜು ಗೊರಡನ್ನು ಒಂದು ಕ್ಷಣವೂ ನಿಲ್ಲಿಸದೆ ಮಗನೊಂದಿಗೆ ಮಾತನಾಡಿದರು, 'ಅವನ ಹಣೆಯ ಬರಹದಲ್ಲಿ ಅಂಥ ಜೀವನ ಬರೆದಿಲ್ಲ ವೇನೋ...'

'ಹೌದು...' ಹರಿಲಾಲ ಮೆಲ್ಲನೆ ಹೇಳಿದ. ಅವರ ಸಮೀಪದಲ್ಲಿ ಕೂತು ಕೆಲಸ ಮಾಡುತ್ತಿದ್ದ ಮೂವರು ತಮ್ಮಂದಿರು ಸಹ ಅಣ್ಣನ ಮಾತುಗಳನ್ನು ಗಮನವಿಟ್ಟು ಕೇಳುತ್ತಿದ್ದರು. ಹರಿಲಾಲ ಮೂವರನ್ನೂ ನೋಡಿ ಹೇಳಿದ, 'ಡಾ. ಪ್ರಾಣಜೀವನ್ ಮೆಹತಾ ಅವರ ಪ್ರಸ್ತಾಪದಂತೆ ಈಗಲೂ ಸಹ ಆಶ್ರಮವಾಸಿಯೊಬ್ಬನನ್ನು ಬ್ಯಾರಿಸ್ಟರ್ ಮಾಡುವುದಾದರೆ...'

'ಹೂಂ...' ಬಾಪೂ ಅವರು ಉಜ್ಜು ಗೊರಡನ್ನು ನಿಲ್ಲಿಸಿ ಹರಿಲಾಲನನ್ನು ನೋಡಿದರು, ಮೂವರು ತಮ್ಮಂದಿರ ಕೈಗಳು ಸಹ ಕೆಲಸವನ್ನು ನಿಲ್ಲಿಸಿದವು. ಬಾಪೂ ಎಲ್ಲರನ್ನು ನೋಡಿ, ಮತ್ತೆ ಉಜ್ಜು ಗೊರಡಿನಿಂದ ಕೆಲಸವನ್ನು ಮುಂದುವರೆಸಿದರು.

'ಡಾಕ್ಟರ್ ಒಳ್ಳೆಯ ಮನುಷ್ಯರು...ಭಗನ್‌ಲಾಲ್ ತನ್ನ ಅಧ್ಯಯನವನ್ನು ಅರ್ಧಕ್ಕೆ ನಿಲ್ಲಿಸಿದಾಗ ತಕ್ಷಣ ಡಾಕ್ಟರ್ ಸಾಹೇಬರು, ಅವನ ಬದಲು ಬೇರೆ ಆಶ್ರಮವಾಸಿಯ ಹೆಸರನ್ನು ಶಿಫಾರಸ್ ಮಾಡಲು ನನಗೆ ಪತ್ರವನ್ನು ಬರೆದಿದ್ದರು...'

'ಓಹ್?' ಹರಿಲಾಲನ ಧ್ವನಿ ಎತ್ತರಕ್ಕೇರಿತು, 'ಬಾಪೂಜಿ, ನೀವೇನು ಮಾಡಿದಿರಿ? ನೀವು ಈಗ ಭಗನ್‌ಲಾಲನ ಬದಲು ನನ್ನನ್ನು ಕಳುಹಿಸಿದ್ದರೆ...'

'ಏನಂದೆ ಹರಿಲಾಲ?' ಬಾಪೂ ಅವರ ಮುಖದಲ್ಲಿ ದುಃಖ ಮೂಡಿತು. ಅವರು ತಮ್ಮ ಕೆಲಸವನ್ನು ನಿಲ್ಲಿಸಿ ಮಗನ ಹೆಗಲ ಮೇಲೆ ಕೈಯಿಟ್ಟರು, 'ದೇಶದ ಸೇವೆಗೆ ಬದಲು ಪರೋಕ್ಷವಾಗಿ ಲಾಭ ಪಡೆಯುವ ನಿನ್ನ ಈ ಯೋಚನೆಯನ್ನು ನೀನಿನ್ನೂ ಬಿಡದಾದೆ? ಭಗನ್‌ಲಾಲನ ಬದಲು ಪಾರಸಿ ಸೋರಾಬರನ್ನು ಕಳುಹಿಸುವ ವ್ಯವಸ್ಥೆಯಾಗಿದೆ.'

'ಸೋರಾಬಜಿ!' ಹರಿಲಾಲನಿಗೆ ದಿಕ್ಕೇ ತೋಚದಂತಾಯಿತು. ಮಣಿಲಾಲ, ರಾಮದಾಸ ಮತ್ತು ದೇವದಾಸ ಇವರ ಪರಿಸ್ಥಿತಿಯೂ ಇದೇ ತೆರನಾಗಿತ್ತು. ಮೂವರು ಸಹೋದರರು ಹರಿಲಾಲನನ್ನು ನೋಡಿದರು.

'ಹೌದು, ಯಾಕೆಂದರೆ ಸೋರಾಬಜಿ ಪಾರಸಿ ಯುವಕ, ಬಾಪೂ ಅವರು ಮೆಲ್ಲನೆ ಅವನಿಗೆ ತಿಳಿಯಪಡಿಸಲು ಪ್ರಯತ್ನಿಸಿದರು, 'ನಾನೊಬ್ಬ ಹಿಂದೂ ಆಗಿ ಪಾರಸಿಯೊಬ್ಬನ ಉತ್ಸಾಹವನ್ನು ಹೆಚ್ಚಿಸಿದರೆ, ಇದರಿಂದ ಇಡೀ ಭಾರತೀಯರಿಗೆ ಶೋಭೆ ತರುತ್ತದೆ. ಅಲ್ಲದೆ ಸೋರಾಬಜಿ ಬುದ್ಧಿವಂತ...ಅವನು ಬ್ಯಾರಿಸ್ಟರ್ ಆದರೆ ಹಣ ಸಂಪಾದನೆಯನ್ನು ಮಾಡುವುದಿಲ್ಲ, ಪ್ರತಿಯಾಗಿ ಇಲ್ಲಿಯೇ ಇದ್ದು ದೇಶದ ಸೇವೆಯನ್ನು ಮಾಡುತ್ತಾನೆ.'

ಹರಿಲಾಲನ ಮುಖ ಸಿಟ್ಟಿನಿಂದ ಕೆಂಡವಾಯಿತು. ಅವನ ತುಟಿಗಳು ಕಂಪಿಸಿದವು. ಮುಖ ಬೆವೆತಿತು. ಕೈ ಮುಷ್ಟಿಗಳ ಅಕಸ್ಮಾತ್ ಬಿಗಿಗೊಂಡವು. ಮೌನದಂಥ ವಾತಾವರಣ ವ್ಯಾಪಿಸಿತು.

'ಬಾಪೂಜಿ!' ಈ ಮೌನವನ್ನು ಭಂಗಗೊಳಿಸುತ್ತಾ ಮೊದಲು ದೇವದಾಸ ಹೇಳಿದ, 'ಹರಿಲಾಲ್ ಅಣ್ಣ ಹೇಗೆ ಸುಮ್ಮನಾದರು?'

'ಏನಿಲ್ಲ ದೇವದಾಸ' ಬಾಪೂ ಅವರು ದೇವದಾಸನ ತಲೆಯನ್ನು ನೇವರಿಸಿದರು.

'ಹರಿಲಾಲ' ಬಾಪೂ ಅವರು ಹರಿಲಾಲನನ್ನು ನೋಡುತ್ತಾ ಶಾಂತಚಿತ್ತದಿಂದ ಹೇಳಿದರು, 'ಹರಿ, ಅರ್ಥ ಮಾಡಿಕೊಳ್ಳಲು ಪ್ರಯತ್ನಿಸು. ನೀನು ಜೈಲಿನಲ್ಲಿ ಭಗವದ್ಗೀತೆಯನ್ನು ಓದಿದ್ದೀಯ. ಮೋಹವನ್ನು ತ್ಯಜಿಸದವನು ಒಳಿತುಕೆಡಕುಗಳ ವಿವೇಕವನ್ನು ಕಳೆದು ಕೊಳ್ಳುತ್ತಾನೆ. ಮೋಹ ನಿನ್ನನ್ನು ಮತ್ತು ನಿನ್ನ ಒಳ್ಳೆಯತನವನ್ನು ತಿನ್ನುವುದಕ್ಕೂ ಮೊದಲೇ ನೀನು ನಿನ್ನ ಮೋಹವನ್ನು ನಾಶಪಡಿಸು.'

ಹರಿಲಾಲ ಉತ್ತರಿಸಲಿಲ್ಲ. ಅವನು ಅಲ್ಲಿಂದ ಮಾತನಾಡದೆ ಹೊರಟು ಬಂದ. ತನ್ನ ಕೈಯಲ್ಲಿದ್ದ ಸಲಕರಣೆಗಳನ್ನು ಅವುಗಳ ಸ್ಥಳದಲ್ಲಿಡಬೇಕು, ಅರ್ಧಂಬರ್ಧ ಆದ ಕೆಲಸಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಸಹ ಅವನು ಯೋಚಿಸಲಿಲ್ಲ. ಬಾಪೂ ಅವರು ಮಗನ ಈ ವರ್ತನೆಯನ್ನು ದುಃಖದಿಂದ ಗಮನಿಸಿದರು. ನಂತರ ಹರಿಲಾಲ ಅರ್ಧಕ್ಕೆ ನಿಲ್ಲಿಸಿದ್ದ ಕೆಲಸವನ್ನು ಪೂರ್ಣ ಮಾಡಲು ತಾವೇ ಅಲ್ಲಿ ಕೂತರು.

ನಿರ್ಧಾರಿತ ಕಾರ್ಯಕ್ರಮದಂತೆ ಬಾಪೂ ಅವರು ಮರುದಿನ ಬೆಳಿಗ್ಗೆ ಜೋಹಾನ್ಸ್‌ಬರ್ಗ್‌ಗೆ ಹೊರಟು ಹೋದರು. ಹರಿಲಾಲ ಮತ್ತೆ ಒಂಟಿಯಾಗಿದ್ದ. ಗುಲಾಬ ಇರಲಿಲ್ಲ, ಅವಳು ಇದ್ದಿದ್ದರೆ ಈ ವ್ಯಾಕುಲತೆಗೆ ಉಪಾಯವೊಂದನ್ನು ಸೂಚಿಸುತ್ತಿದ್ದಳು, ಅವಳು ಬಳಿ ಇದ್ದಿದ್ದರೆ ಮನಸ್ಸಿಗೆ ನೆಮ್ಮದಿ ಲಭಿಸುತ್ತಿತ್ತು. ಬಾ ಅವರು ಫೀನಿಕ್ಸ್ ಆಶ್ರಮದಲ್ಲಿದ್ದರು. ಹರಿಲಾಲನ ಮನಸ್ಸು ಭಾರವಾಯಿತು. ಯಾವ ಕೆಲಸದಲ್ಲೂ ಅವನಿಗೆ ಮನಸ್ಸಿರಲಿಲ್ಲ.

ತನ್ನ ಮನಸ್ಸಿನ ವೇದನೆಯನ್ನು ಹೇಳಿ ತನ್ನನ್ನು ತಾನು ಹಗುರಗೊಳಿಸಿಕೊಳ್ಳುವಂಥ ವ್ಯಕ್ತಿ ಸಹ ಸಮೀಪದಲ್ಲಿರಲಿಲ್ಲ. ಮಣಿಲಾಲ ತನ್ನ ಅಣ್ಣನ ವ್ಯಾಕುಲತೆಯನ್ನು ಅರ್ಥ ಮಾಡಿಕೊಳ್ಳುವಷ್ಟು ದೊಡ್ಡವನಾಗಿರಲಿಲ್ಲ. ಅವನು ಮಾತನಾಡುತ್ತಲೂ ಇರಲಿಲ್ಲ. ಆಶ್ರಮದ ಕೆಲಸಕಾರ್ಯಗಳು ಈ ಹಿಂದಿನಂತೆಯೇ ನಡೆಯುತ್ತಿದ್ದವು. ಹೋರಾಟದ ಕಾವು ಸಹ ಇತ್ತೀಚೆಗೆ ಹೆಚ್ಚಿತ್ತು.

ಹರಿಲಾಲನಿಗೆ ಯಾವುದರಲ್ಲಿಯೂ ಮನಸ್ಸಿರಲಿಲ್ಲ. ಅವನಗೆ ಬಾಪೂ ಅವರ ವರ್ತನೆ ಇದುವರೆಗೆ ಅರ್ಥವಾಗಿರಲಿಲ್ಲ. ಆದರೂ ಬಾಪೂ ಅವರಲ್ಲಿದ್ದ ಒಳ್ಳೆಯತನದಿಂದಾಗಿ ಮನಸ್ಸಿಗೆ ತಿಳಿ ಹೇಳಿಕೊಳ್ಳುತ್ತಿದ್ದ. ತನ್ನ ಮದುವೆಯ ಸಂದರ್ಭದಲ್ಲಿ ಬಾಪೂ ತೋರಿದ ವರ್ತನೆ ಇಷ್ಟು ವರ್ಷಗಳು ಕಳೆದಿದ್ದಾಗ್ಯೂ ಹರಿಲಾಲನ ನೆನಪಿನಲ್ಲಿ ಹಸಿರಾಗಿತ್ತು. ಆಗ ಬಾಪೂ ಅವರು ತಟಸ್ಥರಂತೆ ವ್ಯವಹರಿಸಿದ್ದರು;

'ಹರಿಲಾಲನ ಬಗ್ಗೆ ಒಬ್ಬ ಪುತ್ರನಂತೆ ಯೋಚಿಸುವುದನ್ನು ಬಿಟ್ಟಿದ್ದೇನೆ, ನಾನು ಅವನ ವಿವಾಹದಿಂದ ಸಂತೋಷವನ್ನು ಪಡಲಾರೆ' ಎಂದು ಬಾಪೂ ಅವರು ದೊಡ್ಡಪ್ಪನಿಗೆ ಬರೆದ ಪತ್ರದಲ್ಲಿ ಇಂಥ ಮಾತುಗಳನ್ನು ಬರೆದಿದ್ದರು; ಇದು ನಂತರದಲ್ಲಿ ಹರಿಲಾಲನಿಗೆ ನೆನಪಾಯಿತು.

'ಫೀನಿಕ್ಸ್ ಆಶ್ರಮದಲ್ಲಿ ಮಿಸೆಸ್ ಗಾಂಧಿ ಸಕ್ಕರೆಯನ್ನು ಹೆಚ್ಚು ಬಳಸುತ್ತಾರೆ, ಇದರಿಂದಾಗಿ ಆಶ್ರಮದ ಖರ್ಚು ಹೆಚ್ಚಿದೆ' ಬಾ ಅವರ ಬಗ್ಗೆ ಇಂಥ ದೂರನ್ನು ಸಲ್ಲಿಸಿದ ಆಶ್ರಮವಾಸಿಗಳು ಸಹ ನೆನಪಾದರು. ಆಗ ಆಶ್ರಮವಾಸಿಗಳ ಎದುರೇ ಬಾಪೂ ಅವರು ಬಾ ಅವರ ಮರ್ಯಾದೆಯನ್ನು ಮಣ್ಣುಪಾಲು ಮಾಡಿದ್ದರು. ಹರಿಲಾಲನ ಮನಸ್ಸು ಕಹಿಯಾಯಿತು. ಜೀವನದ ಎಲ್ಲಾ ಭೌತಿಕ ಅನುಕೂಲಗಳು ಮತ್ತು ವೈಭವವನ್ನು ಪಡೆಯುವ ಪೂರ್ಣ ಸಾಮರ್ಥ್ಯವಿದ್ದಾಗ್ಯೂ, ಸ್ವೇಚ್ಛೆಯಿಂದ ಸ್ವೀಕರಿಸಿದ ಈ ಶ್ರಮದ ಮತ್ತು ಸರಳ ಜೀವನ ಹಾಗೂ ಸೇವಾಜೀವನದ ಬಗ್ಗೆ ಅವನಿಗೆ ಮೊದಲ ಬಾರಿಗೆ ಜುಗುಪ್ಸೆ ಬಂತು.

ಬಾಪೂ ಉಚಿತವಾಗಿಯೇ ಹೇಳುತ್ತಿದ್ದರು

ಅವನು ಜೈಲಿನಲ್ಲಿ ಭಗವದ್ಗೀತೆಯನ್ನು ಓದಿದ್ದ. ಅವನಿಂದ ಹೆಚ್ಚು ಅರ್ಥವನ್ನು ಮಾಡಿಕೊಳ್ಳಲು ಸಾಧ್ಯವಾಗಿರಲಿಲ್ಲ, ಆದರೆ ಬಾಪೂ ಅವರು ಗೀತೆಯನ್ನು ಉದಾಹರಿಸಿ, ಮೋಹವನ್ನು ನಾಶ ಮಾಡುವಂತೆ ಸೂಚಿಸಿದ್ದರು, ಈ ವಿಷಯವನ್ನು ಸಹ ಅವನು ಅವಶ್ಯವಾಗಿ ಗೀತೆಯಲ್ಲಿ ಓದಿದ್ದ.